

## ಆಧುನಿಕ 'ರತ್ನಮಂಜರಿ'

ಅರವತ್ತರ ದಶಕದಲ್ಲಿ ಹುಣಸೂರು ಕೃಷ್ಣಮೂರ್ತಿ ನಿರ್ದೇಶಿಸಿದ 'ರತ್ನಮಂಜರಿ' ತನ್ನ ರಮ್ಯ ಜನಪದ ಕಥನದಿಂದ ಚಿತ್ರರಸಿಕರ ಗಮನಸೆಳೆದಿತ್ತು. ಈಗಲೂ 'ರತ್ನಮಂಜರಿ' ಎಂದಕೂಡಲೇ ಕನ್ನಡ ಚಿತ್ರೋದ್ಯಮ ತೆವಳುತ್ತಿದ್ದ ಸಂದರ್ಭದಲ್ಲಿ ಹುಣಸೂರರು ಸೃಷ್ಟಿಸಿದ ತಾಂತ್ರಿಕ ಚಮತ್ಕಾರ ನೆನಪಾಗುತ್ತದೆ. ಇಂಥ ಚಾರಿತ್ರಿಕ ಮಹತ್ವದ ಸಿನಿಮಾದ ಶೀರ್ಷಿಕೆಯನ್ನು ಹೊತ್ತ ಹೊಸ ಚಿತ್ರವೊಂದು ಗಾಂಧಿನಗರದಲ್ಲಿ ರೂಪುಗೊಳ್ಳುತ್ತಿದೆ. ಇದು ಹದಿನಾರಾಣೆ ಸಾಮಾಜಿಕ ಸಿನಿಮಾ.

ಆಧುನಿಕ ರತ್ನಮಂಜರಿ ಒಂದರ್ಥದಲ್ಲಿ ಅಮೆರಿಕನ್ನಡಿಗರ ಸಿನಿಮಾ. ಅಮೆರಿಕದಲ್ಲಿ ಇರುವ ಕನ್ನಡಿಗರೇ ಚಿತ್ರತಂಡದಲ್ಲಿ ಹೆಚ್ಚಾಗಿದ್ದಾರೆ. ಕಲಾವಿದರ ಬಳಗದಲ್ಲಿ ಕೂಡ ಅನಿವಾಸಿ ಕನ್ನಡಿಗರದೇ ಮೇಲುಗೈ. ಸುಮಾರು ಎರಡು ದಶಕಗಳಿಂದ ಅಮೆರಿಕದಲ್ಲಿ ನೆಲಸಿರುವ ನಟರಾಜ್ ಹಳೆಬೀಡು ಹಾಗೂ ಸಂದೀಪ್ ಕುಮಾರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಪ್ರಸಿದ್ಧ್ ಎನ್ನುವ ಹೊಸ ನಿರ್ದೇಶಕ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

ಅಮೆರಿಕದಲ್ಲಿರುವ ಭಾರತೀಯ ಮೂಲದ ವ್ಯಕ್ತಿಯೊಬ್ಬ ಕೊಲೆಗೀಡಾಗುವುದು ಚಿತ್ರಕಥೆಯ ಕೇಂದ್ರ. ಈ ಸಿನಿಮಾ ಕಥನದ ಹಿನ್ನೆಲೆಯಲ್ಲಿ ನೈಜ ಘಟನೆಯ ಪ್ರೇರಣೆ ಇದೆಯಂತೆ. ಕೊಲೆಯ ಕಥಾನಕ ಎಂದಮೇಲೆ ಇದೊಂದು ಮರ್ಡರ್ ಮಿಸ್ಟರಿ ಎಂದು ಸುಲಭವಾಗಿ ಹೇಳಬಹುದು. ಸಿನಿಮಾದ ಮೊದಲ ಭಾಗ ಅಮೆರಿಕದಲ್ಲೂ ಎರಡನೇ ಭಾಗ ಮಡಿಕೇರಿಯಲ್ಲೂ ನಡೆಯಲಿದೆಯಂತೆ. ಹಾಗಾಗಿ, ಮೊದಲ ಭಾಗದಲ್ಲಿ ಅಮೆರಿಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಮಡಿಕೇರಿಯ ಭಾಗದಲ್ಲಿ ಇಲ್ಲಿನವರಿಗೆ ಆದ್ಯತೆ.

ರಾಜ್ ಚರಣ್ ಹಾಗೂ ಅಖಿಲಾ ಪ್ರಕಾಶ್ ಚಿತ್ರದ ಮುಖ್ಯಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಇವರಲ್ಲಿ ಅಖಿಲಾ ಈಗಾಗಲೇ ಕೆಲವು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿನ ಫ್ಯಾಷನ್ ಡಿಸೈನರ್ ಪಾತ್ರ ಅವರಿಗೆ ಖುಷಿಕೊಟ್ಟಿದೆ. ಅಖಿಲಾ ಜೊತೆಗೆ ಇನ್ನೂ ಇಬ್ಬರು ನಾಯಕಿಯರು ಚಿತ್ರದಲ್ಲಿ ಇರಲಿದ್ದಾರಂತೆ. ಪ್ರೀತಂ ತೆಗ್ಗಿನಮನೆ ಛಾಯಾಗ್ರಹಣ ಹಾಗೂ ಹರ್ಷವರ್ಧನ್ ರಾಜ್ ಸಂಗೀತ ಚಿತ್ರಕ್ಕಿದೆ. ಈ ವರ್ಷದ ಕೊನೆಗೆ 'ರತ್ನಮಂಜರಿ' ತೆರೆ ಕಾಣಲಿದೆಯಂತೆ.



## ಪ್ರೇಕ್ಷಕರ ಚಂದಾದ ನಿರೀಕ್ಷೆಯಲ್ಲಿ...

ಶೀರ್ಷಿಕೆಯಿಂದಲೇ ಕುತೂಹಲ ಮೂಡಿಸಿರುವ 'ನೀವು ಕರೆ ಮಾಡಿದ ಚಂದಾದಾರರು' ಚಿತ್ರ ಬಿಡುಗಡೆಯ ತವಕದಲ್ಲಿದೆ. ಮೊನಿಶ್ ನಿರ್ದೇಶನದ ಈ ಸಿನಿಮಾದ ಟ್ರೇಲರ್ ಕಳೆದ ವಾರವಷ್ಟೇ ಬಿಡುಗಡೆಯಾಗಿದ್ದು, ಚಿತ್ರವನ್ನು ತೆರೆಕಾಣಿಸುವ ಪ್ರಯತ್ನದಲ್ಲಿ ಚಿತ್ರತಂಡ ತೊಡಗಿಕೊಂಡಿದೆ. 'ನೀವು ಕರೆ ಮಾಡಿದ ಚಂದಾದಾರರು ಬಿಜಿಯಾಗಿದ್ದಾರೆ' ಶೀರ್ಷಿಕೆಯ ಮತ್ತೊಂದು ಸಿನಿಮಾ ಕೂಡ ಸಿದ್ಧವಾಗುತ್ತಿದೆ. ಆದರೆ, ಮೊನಿಶ್ 'ನೀವು ಕರೆ ಮಾಡಿದ ಚಂದಾದಾರರು' ಎಂದಷ್ಟೇ ತಮ್ಮ ಚಿತ್ರವನ್ನು ಕರೆದಿದ್ದಾರೆ.

ನಟ ದಿಲೀಪ್ ರಾಜ್ ಅವರ ಸೋದರ ಸಂಬಂಧಿಯಾದ ಮೊನಿಶ್ ನಿರ್ದೇಶನದ ಬಗ್ಗೆ ಅಪಾರ ಮೋಹವುಳ್ಳವರು. ಯಾವುದೇ ನಿರ್ದೇಶಕರ ಜೊತೆಯಲ್ಲಿ ಕೆಲಸ ಮಾಡಿರುವ ಅನುಭವ ಅವರಿಗಿಲ್ಲವಾದರೂ, ದಿಲೀಪ್‌ರ ಸ್ಫೂರ್ತಿ ಹಾಗೂ ಸಹಕಾರದಿಂದ ಯಾವುದೇ ಅಡಚಣೆಯಿಲ್ಲದೆ ಚಿತ್ರವನ್ನು ಪೂರೈಸಿದ್ದಾರಂತೆ. ಎರಡು ದಶಕಗಳ ಹಿಂದೆ ತಾವು ಚಿತ್ರರಂಗ ಪ್ರವೇಶಿಸಿದ ದಿನಗಳನ್ನು ನೆನಪಿಸಿಕೊಂಡ ದಿಲೀಪ್, ನಟಿಸುವುದಕ್ಕಿಂತಲೂ ನಿರ್ದೇಶನ ಬಹಳ ಕಷ್ಟ ಎಂದರು. ತಮ್ಮ ಅಕ್ಕನ ಮಗ ಮೊನಿಶ್ ಆತ್ಮವಿಶ್ವಾಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದಿಲೀಪ್ ರಾಜ್, ಶಿಲ್ಪಾ ಮಂಜುನಾಥ್, ಶರತ್, ನಮ್ರತಾ ಜ್ಯಾಕೋಬ್ ತಾರಾಗಣದಲ್ಲಿರುವ ಕೆಲವರು. ಶಿಲ್ಪಾ ಅವರಿಗೆ ಮೊನಿಶ್ ಕೆಲಸ ತುಂಬಾ ಇಷ್ಟವಾಗಿದೆ. ಚಿತ್ರೀಕರದ ಮೊದಲ ದಿನವೇ ಐದು ದೃಶ್ಯಗಳನ್ನು ಚಿತ್ರೀಕರಿಸಿದ್ದು ಅವರಿಗೆ ಆಶ್ಚರ್ಯ ತಂದಿದೆ. ತಮ್ಮ ಪಾತ್ರದ ಪೋಷಣೆ ಕೂಡ ಅವರಿಗಿಷ್ಟವಾಗಿದೆ. ಸಸ್ಪೆನ್ಸ್ ಥ್ರಿಲ್ಲರ್ ಕಥನ ಪ್ರೇಕ್ಷನರನ್ನು ಹಿಡಿದಿಡಲಿದೆ ಎನ್ನುವ ವಿಶ್ವಾಸ ಅವರದು. ಆದಿಲ್ ನದಾಫ್ ಸಂಗೀತ ಹಾಗೂ ಶ್ರೀನಿವಾಸ್ ರಾಮನಗರ ಛಾಯಾಗ್ರಹಣ ಚಿತ್ರಕ್ಕಿದೆ.